MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - THURSDAY 9-3-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಸತತ 3ನೇ ದಿನ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಪ್ರತಿಸ್ಪರ್ಧಿ ಖಾದ್ಯತೈಲಗಳ ದರ ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 3ನೇ ದಿನ ಇಳಿಕೆಯಾಗಿದೆ. ಮಧ್ಯಾಹ್ನದ ಅವಧಿಗೆ 0.24 ಶೇಕಡಾ 10 ರಿಂಗಿಟ್ಸ್ ಇಳಿಕೆಯೊಂದಿಗೆ ಟನ್‌ಗೆ 4195 ರಿಂಗಿಟ್ಸ್ ($928.10) ಆಗಿದೆ. ಈ ವರ್ಷದ ಉತ್ತರಾರ್ಧದಲ್ಲೂ ಪ್ರತಿಕೂಲ ಹವಾಮಾನ ಮುಂದುವರಿದರೆ ಅಲ್ಲಿನ ಪಾಮೆಣ್ಣೆ ಉತ್ಪಾದನೆ ಅಂದಾಜಿಗಿಂತ ಇಳಿಕೆಯಾಗಬಹುದೆನ್ನಲಾಗಿದೆ. ರಫ್ತು ಹೆಚ್ಚುತ್ತಿರುವುದರಿಂದ ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಏಪ್ರಿಲ್ ಅಂತ್ಯದೊಳಗೆ 2 ಮಿಲಿಯನ್ ಟನ್‌ಗಿಂತ ಕಡಿಮೆಯಾಗಬಹುದೆನ್ನಲಾಗಿದೆ. ಅಧಿಕ ಮಳೆಯಿಂದ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ.

## ಬ್ಯಾಡಗಿ ಮೆಣಸು ದರ ಮತ್ತೆ ಏರಿಕೆ

ಬ್ಯಾಡಗಿ ಮೆಣಸಿನ ಆವಕ ಈ ವರ್ಷ ಮಾರ್ಚ ತಿಂಗಳ ಆರಂಭದಲ್ಲಿ ಹೆಚ್ಚಳವಾಗುತ್ತಿಲ್ಲ. ಬೇಸಿಗೆಯಲ್ಲಿ ಅಧಿಕ ಬೇಡಿಕೆಯಿಂದ ಸ್ವಲ್ಪ ಮಟ್ಟಿಗೆ ಇಳಿಕೆ ಕಂಡಿದ್ದ ದರ ಮತ್ತೆ ಹೆಚ್ಚಳವಾಗಿದೆ. ಸಾಮಾನ್ಯವಾಗಿ ಈ ಸಮಯದಲ್ಲಿ ಬೇಡಿಕೆ ಹೆಚ್ಚಳವಿರುತ್ತಿದ್ದರೂ ಆವಕ ಹೆಚ್ಚಳದಿಂದ ದರ ಇಳಿಕೆಯಾಗುತ್ತಿತ್ತು. ಆದರೆ ಈ ವರ್ಷ ಆವಕ ಹೆಚ್ಚಳವಾಗುತ್ತಿಲ್ಲ. ಇದರಿಂದ ದರ ಮತ್ತೆ ಹೆಚ್ಚಳವಾಗಿದೆ ಮುಂದೆ ಆವಕ ಹೆಚ್ಚಳವಾಗಿ ಬೇಡಿಕೆ ಇಳಿಕೆಯಾಗುವ ತನಕ ದರ ಹೆಚ್ಚಳದಲ್ಲೇ ಇರುವ ಸಾಧ್ಯತೆ ಹೆಚ್ಚು.

## ಅಡಿಕೆ ದರ ಮತ್ತೆ ಕುಸಿತ

ಮಂಗಳೂರಿನಲ್ಲಿ ಚಾಲಿ, ಚೋಲ್ ಮತ್ತು ಹೊಸಅಡಿಕೆ ದರಗಳು ಗಣನೀಯ ಇಳಿಕೆ ಕಂಡಿದೆ. ಕಿಲೋಗ್ರಾಂಗೆ ರೂ.20 ರಿಂದ 25 ದರ ಇಳಿಕೆಯಾಗಿದೆ. ಈ ವರ್ಷ ಇದೀಗ 2ನೇ ಬಾರಿಗೆ ದರ ಇಳಿಕೆಯಾಗಿದೆ. ಹೊಸ ಅಡಿಕೆಯ ಕಟಾವಿನ ನಂತರ ಈ ಸಮಯದಲ್ಲಿ ಸಾಮಾನ್ಯವಾಗಿ ಮಾರುಕಟ್ಟೆ ಅಡಿಕೆ ಆವಕ ಹೆಚ್ಚಳವಿರುತ್ತದೆ. ಆಮದು ಸೇರಿದಂತೆ ಸ್ಥಳೀಯ ಪೂರೈಕೆಯೂ ಅಧಿಕ ಪ್ರಮಾಣದಲ್ಲಿರುವ ಸಾಧ್ಯತೆಯಿಂದ ದರ ಇಳಿಕೆಯಾಗಿರುವ ಸಾಧ್ಯತೆಯಿದೆ. ಸದ್ಯ ದರ ದುರ್ಬಲ ಸ್ಥಿತಿಯಲ್ಲಿರುವ ಸಾಧ್ಯತೆ ಹೆಚ್ಚು.